O.S .No. 359/2012
PW-1

ದಿನಾಂಕ: 30-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಸ್.ಎಲ್.ಜಿ. ವಕೀಲರಿಂದಃ</u>**

ನನ್ನ ತಂದೆ ಹೆಸರು ಸಣ್ಣಮರೀಗೌಡರು. ಸದರಿಯವರು 30 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಸದರಿಯವರು ಮೃತಪಟ್ಟಿದ್ದಾರೆಂದು ತೋರಿಸಲು ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ಮರಣ ಪ್ರಮಾಣ ಪತ್ರವನ್ನು ಪಡೆಯಲು ಸಂಬಂಧಪಟ್ಟ ಇಲಾಖೆಯಿಂದ ಪ್ರಯತ್ನಪಟ್ಟಿದ್ದೀರಾ ಎಂದರೆ ಸಾಕ್ಷಿ ಇನ್ನು ತೆಗೆದುಕೊಂಡಿಲ್ಲ ಎಂದು ಹೇಳುತ್ತಾರೆ.

ನನ್ನ ಮದುವೆಯಾಗಿ ಈಗ್ಗೆ 37 ವರ್ಷಗಳಾಗಿರುತ್ತವೆ. ನಿಮ್ಮ ಮದುವೆಯ ಕಾಲಕ್ಕೆ ನಿಮ್ಮ ತಂದೆ ಬದುಕಿದ್ದರಾ ಎಂದರೆ ಸಾಕ್ಷಿ ಬದುಕಿದ್ದರು ಎಂದು ಹೇಳುತ್ತಾರೆ. ನಾನು ಮದುವೆಯಾದಾಗಿನಿಂದ ನನ್ನ ಗಂಡನ ಊರಾದ ರಂಗಯ್ಯನಕೊಪ್ಪಲಿನಲ್ಲಿ ವಾಸವಿದ್ದೇನೆ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಏನು ದಾಖಲೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ವಕೀಲರನ್ನು ಕೇಳಬೇಕೆಂದು ಹೇಳುತ್ತಾರೆ.

ಯಾವ ಯಾವ ಆಸ್ತಿಯ ವಿರುದ್ಧ ಭಾಗ ಕೋರಿ ದಾವೆ ಹೂಡಿದ್ದೀರಾ ಎಂದರೆ ಸಾಕ್ಷಿ ಹುಸೇನಪುರದ 2 ಎಕರೆ ಜಮೀನು ಹಾಗೂ ಮನುಗನಹಳ್ಳಿಯ 2 ½ ಎಕರೆ, ಮಾವಿನ ತೋಟ 2 ಎಕರೆ, ಮನೆ ಹಾಗೂ ನಿವೇಶನದ ಸಂಬಂಧ ಹೂಡಿದ್ದೇನೆ ಎಂದು ಹೇಳುತ್ತಾರೆ. ಸದರಿ ಆಸ್ತಿಗಳು ಯಾರ ಹೆಸರಿನಲ್ಲಿವೆ ಎಂದರೆ ಸಾಕ್ಷಿ ನನ್ನ ತಂದೆಯ ಹೆಸರಿನಲ್ಲಿ ಎಂದು ಹೇಳುತ್ತಾರೆ. ನಿಮ್ಮ ತಂದೆಯ ಹೆಸರನಲ್ಲಿರುವ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ.

ನಿಮ್ಮ ತಂದೆಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ ಪುಟ್ಟಸ್ವಾಮಿಗೌಡ, ಕಾಳೇಗೌಡ, ರಾಜೇಗೌಡ, ಸಾವಿತ್ರಮ್ಮ ಮತ್ತು ನಾನು ಎಂದು ಹೇಳುತ್ತಾರೆ. ಸದರಿಯವರೆಲ್ಲರು ಮದುವೆಯಾಗಿ ಮಕ್ಕಳಿದ್ದಾರೆಂದರೆ ಸರಿ. ಸದರಿಯವರು ತಮ್ಮ ಕುಟುಂಬದ ಜೊತೆ ಪ್ರತ್ಯೇಕವಾಗಿ ವಾಸವಿದ್ದಾರೆಂದರೆ ಸಾಕ್ಷಿ ಈಗ ಇದ್ದಾರೆಂದು ಹೇಳುತ್ತಾರೆ. ಸದರಿಯವರೆಲ್ಲ

ಎಷ್ಟು ವರ್ಷಗಳಿಂದ ಪ್ರತ್ಯೇಕ ಇದ್ದಾರೆಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಈಗ್ಗೆ ಸ್ವಲ್ಪ ದಿನಗಳ ಕೆಳಗೆ ನನ್ನ ತಾಯಿ ಸಿದ್ದಮ್ಮ ಮೃತಪಟ್ಟಿರುತ್ತಾರೆ. ನಿಮ್ಮ ತಾಯಿ ಬದುಕಿದ್ದಾಗಲೇ ನಿಮ್ಮ ಅಣ್ಣ ತಮ್ಮಂದಿರು ಪ್ರತ್ಯೇಕವಾಗಿದ್ದರು ಎಂದರೆ ಸರಿ. ನಿಮ್ಮ ಅಣ್ಣ ತಮ್ಮಂದಿರು ಆಸ್ತಿಗಳನ್ನು ಭಾಗ ಮಾಡಿಕೊಂಡು ಅನುಬೋಗ ಮಾಡುತ್ತಿದ್ದಾರೆಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.

ನೀವು, ನಿಮ್ಮ ತಾಯಿ ಹಾಗೂ ಅಣ್ಣತಮ್ಮಂದಿರು, ನಿಮ್ಮ ತಾಯಿ ಬದುಕಿದ್ದಾಗ ಅನ್ಯೋನ್ಯವಾಗಿದ್ದೀರಿ ಎಂದರೆ ಸರಿ. ನಿಮ್ಮ ಅಣ್ಣತಮ್ಮಂದಿರು ಆಸ್ತಿಗಳನ್ನು ತಮ್ಮ ಹೆಸರಿಗೆ ಭಾಗ ಮಾಡಿಕೊಂಡು, ಅವರವರೇ ಅನುಭೋಗ ಮಾಡುತ್ತಿದ್ದಾರೆಂದರೆ ಸಾಕ್ಷಿ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ.

ದಾವಾ ಆಸ್ತಿಗಳನ್ನು ನಿಮ್ಮ ತಾಯಿ ಬದುಕಿದ್ದಾಗ ನಿಮ್ಮ ಅಣ್ಣತಮ್ಮಂದಿರು, ನಿಮ್ಮ ತಾಯಿ ದಿಃ11.10.1995 ರಂದು ದಾವಾ ತಪಶೀಲು ಆಸ್ತಿ ಸಂ.1 ಮತ್ತು 3 ನ್ನು ನೊಂದಣಿ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ತಪಶೀಲು ಆಸ್ತಿ ಸಂ.3, 1 ಎಕರೆ 22 ಗುಂಟೆ ವಿಸ್ತೀರ್ಣ ಇದೆ ಎಂದರೆ ಸರಿಯಲ್ಲ. ದಾವಾ ತಪಶೀಲು ಆಸ್ತಿ ಸಂ.3 ಕ್ಕೆ ಸಂಬಂಧಿಸಿದಂತೆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಳೆಯದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ಸಂ.3 ರ 15 ಗುಂಟೆ ಜಮೀನನ್ನು ನಿಮ್ಮ ಹೆಸರಿಗೆ ಭಾಗಕ್ಕೆ ಕೊಡಲಾಗಿತ್ತು ಎಂದರೆ ಸಾಕ್ಷಿ ಒಟ್ಟು ಕುಟುಂಬದ ಆಸ್ತಿಯನ್ನು ಮಾರಾಟ ಮಾಡುತ್ತಿದ್ದರು, ನನ್ನ ಯಜಮಾನರು ಹಣ ಕಟ್ಟಿ ನನ್ನ ಹೆಸರಿಗೆ ಮಾಡಿಸಿರುತ್ತಾರೆ ಎಂದು ಹೇಳುತ್ತಾರೆ. ಸದರಿ 15 ಗುಂಟೆ ಆಸ್ತಿಯನ್ನು ಮುಪ್ಪತ್ತಾಗಿ ನಿಮ್ಮ ಅಣ್ಣತಮ್ಮಂದಿರು ಹಾಗೂ ನಿಮ್ಮ ತಾಯಿ ನಿಮ್ಮ ಹೆಸರಿಗೆ ಕ್ರಯ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. 15 ಗುಂಟೆ ಹೊರತುಪಡಿಸಿ, ಉಳಿದ 1 ಎಕರೆ 22 ಗುಂಟೆ ಪೈಕಿ, 3 ರಿಂದ 5 ನೇ ಪ್ರತಿವಾದಿಗಳಿಗೆ 9 ಗುಂಟೆ, 6 ನೇ ಪ್ರತಿವಾದಿಗೆ 14 ಗುಂಟೆ, 7 ನೇ ಪ್ರತಿವಾದಿಗೆ 14 ಗುಂಟೆ ಮತ್ತು ಮೃತ ಸಿದ್ದಮ್ಮನಿಗೆ 10 ಗುಂಟೆ ಆಸ್ತಿಯನ್ನು ನೀಡಲಾಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ದಾವಾ ತಪಶೀಲು ಆಸ್ತಿ ಸಂ.1 ರ ಸ.ನಂ.22 ರಲ್ಲಿ 3 ರಿಂದ 5 ನೇ ಪ್ರತಿವಾದಿಗಳಿಗೆ 00-1 ½ ಗುಂಟೆ, ಸ.ನಂ.00-23 ರಲ್ಲಿ 23 ಗುಂಟೆಯನ್ನು ಭಾಗಕ್ಕೆ ಕೊಡಲಾಗಿದೆ

ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ಸಂ.1 ರ ಸ.ನಂ.22 ರಲ್ಲಿ 6 ನೇ ಪ್ರತಿವಾದಿಗೆ 00-1 ½ ಗುಂಟೆ, ಸ.ನಂ.23 ರಲ್ಲಿ 00-23 ಗುಂಟೆಯನ್ನು ಭಾಗಕ್ಕೆ ಕೊಡಲಾಗಿದೆ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ಸಂ.1 ರ ಸ.ನಂ.22 ರಲ್ಲಿ 7 ನೇ ಪ್ರತಿವಾದಿಗೆ 2 ಗುಂಟೆ, ಸ.ನಂ.23 ರಲ್ಲಿ 00-24 ಗುಂಟೆಯನ್ನು ಭಾಗಕ್ಕೆ ಕೊಡಲಾಗಿದೆ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ನೊಂದಾಯಿತ ಪಾಲು ಪಾರಿಕತ್ ಪ್ರಕಾರ ಕಂದಾಯ ದಾಖಲಾತಿಗಳನ್ನು ಸಹ ನಮೂದಿಸಲಾಗಿದೆ ಎಂದರೆ ಸರಿಯಲ್ಲ.

ನಿಪಿ-2 ರಿಂದ 6 ರಂತೆ ಪ್ರತಿವಾದಿಗಳ ಹೆಸರಿಗೆ ವಿಭಾಗ ಪತ್ರದ ಮೂಲಕ ಖಾತೆ ಬಂದಿರುತ್ತದೆ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ನಿಪಿ-6 ರಂತೆ ನಿಮಗೆ 15 ಗುಂಟೆ ಜಮೀನನ್ನು ದಾವಾ ತಪಶೀಲು ಆಸ್ತಿ ಸಂ.3 ರಲ್ಲಿ ಭಾಗಕ್ಕೆ ನೀಡಲಾಗಿತ್ತು ಎಂದರೆ ಸಾಕ್ಷಿ ಕ್ರಯಕ್ಕೆ ತೆಗೆದುಕೊಂಡಿದ್ದು ಎಂದು ಹೇಳುತ್ತಾರೆ. ಸದರಿ 15 ಗುಂಟೆ ಜಮೀನನ್ನು ದಾವೆಯಲ್ಲಿ ಸೇರಿಸಿದ್ದೀರಾ ಎಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲಿ ಇದ್ದಾಗಲೇ ಮಾಡಿದ್ದು, ಅದೆಲ್ಲಾ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ಸಂ.3 ರಲ್ಲಿನ ನಿಮ್ಮ ಹೆಸರಿನಲ್ಲಿರುವ 15 ಗುಂಟೆ ಆಸ್ತಿಯನ್ನು ಉದ್ದೇಶಪೂರ್ವಕವಾಗಿ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಾಯಿ ಹಾಗೂ ಅಣ್ಣತಮ್ಮಂದಿರ ನಡುವೆ ಈಗಾಗಲೇ 1995 ರಲ್ಲಿ ವಿಭಾಗ ಮಾಡಿಕೊಂಡು, ಅನುಬೋಗ ಮಾಡುತ್ತಿರುವುದರಿಂದ ದಾವಾ ಆಸ್ತಿಯಲ್ಲಿ ನಿಮಗೆ ಯಾವುದೇ ಭಾಗದ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳು ಮೋಸದಿಂದ ದಾಖಲೆ ಮಾಡಿಸಿಕೊಂಡಿದ್ದಾರೆಂದು ನಿಮ್ಮ ಗಮನಕ್ಕೆ ಯಾವಾಗ ಬಂತು ಎಂದರೆ ಸಾಕ್ಷಿ 8 ನೇ ಪ್ರತಿವಾದಿಗೆ ಮಾರಾಟ ಮಾಡಿದಾಗ ಗೊತ್ತಾಯಿತು ಎಂದು ಹೇಳುತ್ತಾರೆ. ಯಾವಾಗ ಮಾರಾಟ ಮಾಡಿದರು ಎಂದರೆ ಸಾಕ್ಷಿ ಗೊತ್ತಾಗುವುದಿಲ್ಲ, ವಕೀಲರನ್ನು ಕೇಳಬೇಕೆಂದು ಹೇಳುತ್ತಾರೆ. ಯಾವ ಸ.ನಂ. ನ್ನು ಮಾರಾಟ ಮಾಡಿದ್ದಾರೆಂದರೆ ಸಾಕ್ಷಿ ಹಳೆಯದ್ದು ಗೊತ್ತಿಲ್ಲ ಎಂದು ಹೇಳುತ್ತಾರೆ.

ದಾವಾ ತಪಶೀಲು ಆಸ್ತಿ ಸಂ.2 ರ ಸ.ನಂ.62/1 ರಲ್ಲಿ ಎಷ್ಟು ಎಕರೆ ಜಮೀನು ಇದೆ ಎಂದರೆ ಸಾಕ್ಷಿ 2-20 ಎಕರೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು 6 ನೇ ಪ್ರತಿವಾದಿ 1-00 ಎಕರೆ ಮಾಡಿಸಿಕೊಂಡಿದ್ದಾರೆಂದು ಹೇಳುತ್ತಾರೆ. ಸ.ನಂ.62/10 ರಲ್ಲಿ

ಎಷ್ಟಿದೆ ಎಂದರೆ ಸಾಕ್ಷಿ ಅದೆಲ್ಲ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ಸಂ.2 ಸ.ನಂ.62 ಯಾರ ಹೆಸರಿನಲ್ಲಿದೆ ಎಂದು ತೋರಿಸಲ ದಾಖಲಾತಿ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಮೃತ 8 ನೇ ಪ್ರತಿವಾದಿ ಹೆಸರಿನಲ್ಲಿದ್ದ ದಾಖಲಾತಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಸ.ನಂ.62 ರಲ್ಲಿ ಒಟ್ಟು ಎಷ್ಟು ಪೋಡುಗಳಿವೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸ.ನಂ.62 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದರೆ ಸಾಕ್ಷಿ 4-00 ಎಕರೆ 00-10 ಗುಂಟೆ ಎಂದು ಹೇಳುತ್ತಾರೆ. ದಿಃ16.03.1956 ರಲ್ಲಿ ಸ.ನಂ.62, 1 ಮತ್ತು 2 ನೇ ಪ್ರತಿವಾದಿಯ ತಾಯಿ ಸಾವಿತ್ರಮ್ಮ, 3 ರಿಂದ 5 ನೇ ಪ್ರತಿವಾದಿಗಳ ತಂದೆ ಪುಟ್ಟಸ್ವಾ ಮಿಗೌಡ, 6 ನೇ ಪ್ರತಿವಾದಿ ಕಾಳೇಗೌಡ, ಸದರಿ ಮೂರು ಜನರ ಅಪ್ರಾಪ್ತರ ಪರವಾಗಿ ಮೃತ 8 ನೇ ಪ್ರತಿವಾದಿ ಸಿದ್ದಮ್ಮ ಸ.ನಂ.62/1 ಮತ್ತು ಸ.ನಂ.62/8 ವಿಸ್ತೀರ್ಣ 3-00 ಎಕರೆ ಕಾಳೇಗೌಡರಿಂದ ಖರೀದಿಸಿರುತ್ತಾರೆಂದರೆ ಸರಿಯಲ್ಲ. ದಿಃ13.05-1960 ರಂದು ಸ.ನಂ.62/4 ರಲ್ಲಿ ಮೃತ 8 ನೇ ಪ್ರತಿವಾದಿ ಹೆಸರಿನಲ್ಲಿ ಕಾಳೇಗೌಡರಿಂದ 30 ಗುಂಟೆಯನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು).**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.